ಹಾಸನದ 3 ನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ

ಎಸ್.ಸಿ. 7/2016.

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ದತ್ತಾತ್ರೇಯ ಪ್ರಸನ್ನ | ಪಿಡಬ್ಲ್ಯೂ 4 | |
| ತಂದೆಯ/ಗಂಡನ ಹೆಸರು | ಃ ಸತ್ಯನಾರಾಯಣ | ಸಿಡಬ್ಲ್ಯೂ 6 | |
| ವಯಸ್ಸು | ಃ 51 | ದಿನಾಂಕ: | 13-02-2020 |
| ಕಸುಬು | ಃ ಅರ್ಚಕರು | ಸಾಕ್ಷಿದಾರರಿಗೆ ಪ್ರಮಾಣವಚನ | |
| ವಾಸ | ಃ ಹಾಸನ | ಬೋಧಿಸಲಾಯಿತು | |

ಮುಖ್ಯ ವಿಚಾರಣೆ - ಸರ್ಕಾರಿ ಅಭಿಯೋಜಕರಿಂದಃ- ಅಭಿಯೋಜನೆಯ ಪರವಾಗಿಃ-

ಸಾಕ್ಷಿ ನಿಪಿ 2 ರಲ್ಲಿಯ ತಮ್ಮ ರುಜು ಗುರುತಿಸಿದರು ಅದಕ್ಕೆ ನಿಪಿ 2 ಬಿ ಎಂದು ಗುರುತಿಸಲಾಯಿತು. ಸದರಿ ರುಜುವನ್ನ ಐದು ವರ್ಷಗಳ ಹಿಂದೆ ಕಿತ್ತಾನೆ ಗ್ರಾಮದಲ್ಲಿರುವ ಕೃಷ್ಣಮೂರ್ತಿ ರವರ ಮನೆಯಲ್ಲಿ ಹಾಕಿದ್ದೆನು. ಸದರಿ ರುಜುವನ್ನ ರಾತ್ರಿ ದರೋಡೆಯಾಗಿದ್ದರ ಕುರಿತು ಹಾಕಿದ್ದೆನು. ಆ ಕಾಲಕ್ಕೆ ಫ್ರಾಸಾ 2 , ಚಾಸಾ 4 ರವರು ಹಾಜರಿದ್ದರು. ಆ ಕಾಲಕ್ಕೆ ಎರಡು ಕಬ್ಬಿಣದ ರಾಡುಗಳನ್ನ ಪೋಲೀಸರು ತೆಗೆದುಕೊಂಡಿದ್ದರು. ಸಾಕ್ಷಿ ನ್ಯಾ .ದ ಮುಂದಿರುವ ಎಂ ಒ 1 -ಎರಡು ಕಬ್ಬಿಣದ ರಾಡುಗಳನ್ನ ನೋಡಿ ಗುರುತಿಸಿದರು. ಮಹಜರ್ ನ್ನ ಘಟನೆ ನಡೆದ ಮಾರನೇ ದಿನ ಜರುಗಿಸಿದ್ದರು.

ಪಾಟೀಸವಾಲುಃ- ಶ್ರೀ ಹೆಚ್ ಜೆ ಆರ್ ವಕೀಲರಿಂದ

ನಾನು ಫ್ರಾಸಾ 2 ರವರ ಮನೆಗೆ ಬೆಳಿಗ್ಗೆ 6-30 / 7 ಗಂಟೆಗೆ ಹೋಗಿದ್ದೆನು. ಸದರಿಯವರ ಮನೆಯಲ್ಲಿ ಮದ್ಯಾಹ್ನ 3 ಗಂಟೆಯವರಗೆ ಇದ್ದೆನು. ಸದರಿ ಅವಧಿಯಲ್ಲಿ ಅಂದಾಜು 15-20 ಜನ ಸದರಿ ಸ್ಥಳಕ್ಕೆ ಬಂದು ಹೋಗಿದ್ದರು. ಪೋ.ರು ಬೆಳಿಗ್ಗೆ 10-30 / 11 ಕ್ಕೆ ಬಂದಿರಬಹುದು. ಪೋಲೀಸರು ನನಗೆ ಸಾಕ್ಷಿಯಾಗಲು ಕೋರಿದ್ದರು. ಸಾಕ್ಷಿ ಮುಂದುವರೆದು ಫ್ರಾಸಾ 3 ನನ್ನ ಸಹೋದರಿಯಾಗಿದ್ದರಿಂದ ನಾನು ಅವರ ಮನೆಗೆ ಹೋಗಿದ್ದೆನು. ಮಹಜರ್ ನ್ನ ಬೆಳಿಗ್ಗೆ 11-30 ರಿಂದ ಮದ್ಯಾಹ್ನ 1 ರ ಅವಧಿಯೊಳಗೆ ಬರೆದಿರಬಹುದು. ಎಂ ಒ 1 ರ ಮೇಲೆ ನನ್ನ ಸಹಿಯುಳ್ಳ ಚೀಟಿಯನ್ನ ಅಂಟಿಸಿರಲಿಲ್ಲ.

ಪ್ರಃ ಪೋ.ರು ಸದರಿ ಮನೆಯಲ್ಲಿದ್ದ ಬೇರೆ ವಸ್ತುಗಳನ್ನ ತೆಗೆದುಕೊಂಡರೆ

ಉಃ ಬೆರಳಚ್ಚು ತಜ್ಞರು ಬರುವವರೆವಿಗೂ ಒಳಗಡೆ ಯಾರನ್ನ ಬಿಟ್ಟಿರಲಿಲ್ಲ ನಂತರ ಎಂ ಒ 1

ನ್ನ ಮಾತ್ರ ತೆಗೆದುಕೊಂಡರು. ನಾನು ನಿಪಿ 2 ಕ್ಕೆ ಗೊರೂರು ಪೋ ಠಾಣೆಯಲ್ಲಿ ರುಜು ಹಾಕಿರುವೆನು ಎಂದರೆ ಸರಿಯಲ್ಲ. ಫ್ರಾಸಾ 3 ನನ್ನ ಸಹೋದರಿಯಾಗಿರುವ ಕಾರಣ ನಿಪಿ 2 ಕ್ಕೆ ಗೊರೂರು ಪೋ ಠಾಣೆಯಲ್ಲಿ ರುಜು ಹಾಕಿದ್ದರು ಅವರಿಗೆ ಸಹಾಯ ಮಾಡಲು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲಾ

**(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ.ಸ.ಇದೆ.**

**(ಚಂದ್ರಶೇಖರ್ ಮರಗೂರ್)**

**3 ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು,**

**ಹಾಸನ.**